Akashvani : Bangalore
National Bulletin In Kannada
06.07.2024: 7.35AM

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

06.07.2024: 7.35AM

********

**ಮುಖ್ಯಾಂಶಗಳು:**

1. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಯೋಧರಿಗೆ ೩೬ ಶೌರ್ಯ ಪ್ರಶಸ್ತಿ ಪ್ರದಾನ; ಮರಣೋತ್ತರವಾಗಿ ೧೪ ಯೋಧರಿಗೆ ಕೀರ್ತಿ ಹಾಗೂ ಶೌರ್ಯ ಚಕ್ರ
2. ಬ್ರಿಟನ್‌ನಲ್ಲಿ ನೂತನ ಸರ್ಕಾರ ರಚಿಸುತ್ತಿರುವ ಲೇಬರ್ ಪಾರ್ಟಿ ಮುಖಂಡ ಕೇರ್ ಸ್ಟಾರ್ಮರ್ ಅವರನ್ನು ಅಭಿನಂದಿಸಿದ ಪ್ರಧಾನಿ ನರೇಂದ್ರ ಮೋದಿ
3. ಸೆಪ್ಟೆಂಬರ್‌ನಲ್ಲಿ ೫ಜಿ, ೬ಜಿ ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ಹ್ಯಾಕಥಾನ್ - ಸಂವಹನ ಸಚಿವಾಲಯ
4. ಹಥ್ರಾಸ್ ಕಾಲ್ತುಳಿತ ದುರಂತ; ಪ್ರಮುಖ ಆರೋಪಿ ದೇವ್‌ಪ್ರಕಾಶ್ ಮಧುಕರ್‌ನನ್ನು ಬಂಧಿಸಿದ ಉತ್ತರ ಪ್ರದೇಶ ಪೊಲೀಸ್
5. ಮಹಿಳಾ ಟಿ-೨೦ ಕ್ರಿಕೆಟ್; ದಕ್ಷಿಣ ಆಫ್ರಿಕಾ ವಿರುದ್ಧ ಭಾರತಕ್ಕೆ ೧೨ ರನ್‌ಗಳ ಸೋಲು

******

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಿನ್ನೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಶಸ್ತ್ರ ಪಡೆ, ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಮತ್ತು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದ ಪೊಲೀಸರಿಗೆ ೩೬ ಶೌರ್ಯ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ನಿನ್ನೆ ಸಂಜೆ ನಡೆದ ರಕ್ಷಣಾ ಹೂಡಿಕೆ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಶೌರ್ಯ ಪ್ರಶಸ್ತಿಗಳು ಹತ್ತು ಕೀರ್ತಿ ಚಕ್ರ ಮತ್ತು ೨೬ ಶೌರ್ಯ ಚಕ್ರಗಳನ್ನು ಒಳಗೊಂಡಿವೆ. ಈ ಪೈಕಿ, ಏಳು ಸಿಬ್ಬಂದಿಗೆ ಮರಣೋತ್ತರವಾಗಿ ಕೀರ್ತಿ ಚಕ್ರಗಳು ಮತ್ತು ಏಳು ಶೌರ್ಯ ಚಕ್ರಗಳನ್ನು ನೀಡಲಾಯಿತು. ಶೌರ್ಯ, ಧೈರ್ಯ ಮತ್ತು ಕರ್ತವ್ಯದ ಮೇಲಿನ ಶ್ರದ್ಧೆಯನ್ನು ಪ್ರದರ್ಶಿಸಿದ ಸಿಬ್ಬಂದಿಗಳಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ಉಪರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಈ ಕುರಿತು ಸಾಮಾಜಿಕ

ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಯೋಧರ ಶೌರ್ಯ ಹಾಗೂ ಸಮರ್ಪಣಾಭಾವದ ಬಗ್ಗೆ ದೇಶ ಹೆಮ್ಮೆಪಡುತ್ತದೆ. ಕರ್ತವ್ಯ ಮತ್ತು ತ್ಯಾಗದ ಮೌಲ್ಯಗಳನ್ನು ಯೋಧರು ಎತ್ತಿಹಿಡಿದಿದ್ದು, ಅವರ ಸಾಹಸ, ದೇಶದ ಜನರಿಗೆ ಎಂದಿಗೂ ಸ್ಫೂರ್ತಿದಾಯಕವಾಗಿರಲಿದೆ ಎಂದಿದ್ದಾರೆ.

******

ಬ್ರಿಟನ್ ಚುನಾವಣೆಯಲ್ಲಿ ಜಯ ಸಾಧಿಸಿದ ಲೇಬರ್ ಪಾರ್ಟಿ ಮುಖಂಡ ಕೇರ್ ಸ್ಟಾರ್ಮರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಅವರು, ಭಾರತ ಹಾಗೂ ಬ್ರಿಟನ್ ನಡುವಿನ ವಿವಿಧ ಕ್ಷೇತ್ರಗಳಲ್ಲಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸುವಲ್ಲಿ ಸಕಾರಾತ್ಮಕ ಮತ್ತು ರಚನಾತ್ಮಕ ಸಹಯೋಗವನ್ನು ಎದುರು ನೋಡುತ್ತಿದ್ದೇವೆ ಎಂದಿದ್ದಾರೆ. ಇದೇ ವೇಳೆ ಅವರು, ನಿರ್ಗಮಿತ ಪ್ರಧಾನಿ ರಿಷಿ ಸುನಕ್ ಅವರ ಪ್ರಶಂಸನೀಯ ನಾಯಕತ್ವ ಮತ್ತು ಉಭಯ ರಾಷ್ಟ್ರಗಳ ನಡುವಿನ ಸಂಬಂಧ ಬಲವರ್ಧನೆಗೆ ನೀಡಿದ ಕೊಡುಗೆಯನ್ನು ಶ್ಲಾಘಿಸಿದ್ದಾರೆ. ಒಂದು ದಶಕಕ್ಕೂ ಹೆಚ್ಚು ಕಾಲ ವಿರೋಧ ಪಕ್ಷದ ಸ್ಥಾನದಲ್ಲಿದ್ದ ಲೇಬರ್ ಪಕ್ಷವು ಇದೀಗ ಅಧಿಕಾರಕ್ಕೆ ಬಂದಿದೆ. ಒಟ್ಟು ೬೫೦ ಸ್ಥಾನಗಳ ಪೈಕಿ ಲೇಬರ್ ಪಕ್ಷವು ೪೧೨ ಸ್ಥಾನಗಳಲ್ಲಿ ಜಯ ಸಾಧಿಸಿದೆ. ಇದೇ ವೇಳೆ ದೊರೆ ಮೂರನೇ ಚಾರ್ಲ್ಸ್ ಅವರು ಲೇಬರ್ ಪಕ್ಷದ ಮುಖಂಡ ಕೀರ್ ಸ್ಟಾರ್ಮರ್ ಅವರನ್ನು ನೂತನ ಸರ್ಕಾರ ರಚಿಸಲು ಆಹ್ವಾನಿಸಿದ್ದಾರೆ ಎಂದು ಬಕಿಂಗ್‌ಹ್ಯಾಮ್ ಅರಮನೆ ಘೋಷಿಸಿದೆ. ೬೧ ವರ್ಷದ ಲೇಬರ್ ಪಕ್ಷದ ನಾಯಕ ಸ್ಟಾರ್ಮರ್, ನೂತನ ಪ್ರಧಾನಿಯಾದ ನಂತರ ತಮ್ಮ ಮೊದಲ ಭಾಷಣದಲ್ಲಿ, ದೇಶದ ಅಭ್ಯುದಯಕ್ಕೆ ಸೂಕ್ತ ಕಾರ್ಯಗಳ ಜತೆಗೆ ಫಲಿತಾಂಶವನ್ನು ಒದಗಿಸುವ ಅಗತ್ಯವಿದೆ ಎಂದ ಅವರು, ತಾವು ಬದಲಾವಣೆಯನ್ನು ತರಲು ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದರು. ಇದೇ ವೇಳೆ ಅವರು, ನಿರ್ಗಮಿತ ಪ್ರಧಾನಿ ರಿಷಿ ಸುನಕ್ ಅವರನ್ನು ಅವರ ನಾಯಕತ್ವ, ಸಮರ್ಪಣಾಭಾವ ಮತ್ತು ಶ್ರಮಕ್ಕಾಗಿ ಶ್ಲಾಘಿಸಿದರು.

******

ಬರುವ ಸೆಪ್ಟೆಂಬರ್‌ನಲ್ಲಿ ೫ಜಿ, ೬ಜಿ ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ಹ್ಯಾಕಥಾನ್ ಅನ್ನು ವಿಶ್ವ ದೂರಸಂಪರ್ಕ ಪ್ರಮಾಣೀಕರಣ ಅಸೆಂಬ್ಲಿ ಔಟ್‌ರೀಚ್ ಸೆಷನ್ಸ್' - WTSA24 ಜೊತೆಗೆ ಆಯೋಜಿಸಲಾಗುತ್ತಿದೆ ಎಂದು ಸಂವಹನ ಸಚಿವಾಲಯ ತಿಳಿಸಿದೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಸಚಿವಾಲಯ, ಮುಂದಿನ ಪೀಳಿಗೆಯ ಟೆಲಿಕಾಂ ತಂತ್ರಜ್ಞಾನ ವಲಯದ ಕುರಿತು ಚರ್ಚೆ ನಡೆಸುವ ನಿಟ್ಟಿನಲ್ಲಿ  ನವೋದ್ಯಮದ ಮತ್ತು ಕೈಗಾರಿಕಾ ವಲಯದ ನಾಯಕರು ಹಾಗೂ

ಶಿಕ್ಷಣತಜ್ಞರನ್ನು ಒಟ್ಟುಗೂಡಿಸುವ ಉದ್ದೇಶವನ್ನು ಈ ಉಪಕ್ರಮವು ಹೊಂದಿದೆ ಎಂದು ತಿಳಿಸಿದೆ. ದೆಹಲಿ, ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿ ಮೀಸಲಾದ ೫ಜಿ ಲ್ಯಾಬ್‌ಗಳಲ್ಲಿ ೩೦ ಗಂಟೆಗಳ ಕಾಲ ಈ ಕಾರ್ಯಕ್ರಮ ನಡೆಯಲಿದೆ. ಈ ಹ್ಯಾಕಥಾನ್, ದೂರಸಂಪರ್ಕ ವಲಯದಲ್ಲಿ ಅತ್ಯಾಧುನಿಕ ಆವಿಷ್ಕಾರದ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ೫ಜಿ ಮತ್ತು ೬ಜಿ ಯಂತಹ ತಂತ್ರಜ್ಞಾನಗಳ ಮೇಲೆ ಕೇಂದ್ರೀಕರಿಸಿದ ಕಾರ್ಯಕ್ರಮ - ಉದ್ಯಮ, ಅಕಾಡೆಮಿ ಮತ್ತು ನವೋದ್ಯಮಿಗಳನ್ನು ಆಕರ್ಷಿಸಲಿದೆ.

******

ಉತ್ತರ ಪ್ರದೇಶದ ಹಥ್ರಾಸ್‌ನಲ್ಲಿ ೧೨೧ ಜನರ ಸಾವಿಗೆ ಕಾರಣವಾದ ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಪೊಲೀಸ್ ದೇವ್‌ಪ್ರಕಾಶ್ ಮಧುಕರ್‌ನನ್ನು ಬಂಧಿಸಿದೆ. ಈ ಕುರಿತು ದಾಖಲಾದ ಎಫ್‌ಐಆರ್‌ನಲ್ಲಿ ದೇವ್‌ಪ್ರಕಾಶ್ ಮಧುಕರ್‌ನನ್ನು ಪ್ರಮುಖ ಆರೋಪಿಯಾಗಿ ದಾಖಲಿಸಲಾಗಿದೆ. ಈ ಮೊದಲು ಆರೋಪಿಯ ಕುರಿತು ಮಾಹಿತಿ ನೀಡಿದವರಿಗೆ ಒಂದು ಲಕ್ಷ ರೂಪಾಯಿ ಬಹುಮಾನವನ್ನು ಘೋಷಿಸಲಾಗಿತ್ತು. ಈ ಘಟನೆಗೆ ಸಂಬಂಧಿಸಿದಂತೆ ಸತ್ಸಂಗ ಆಯೋಜನಾ ಸಮಿತಿಯ ಸದಸ್ಯರಾಗಿದ್ದ ೬ ಜನರನ್ನು ಬಂಧಿಸಿದ ಬಳಿಕ, ದೇವ್‌ಪ್ರಕಾಶ್‌ನನ್ನು ಬಂಧಿಸಲಾಗಿದೆ.

******

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದಿನಿಂದ ನಾಲ್ಕು ದಿನಗಳ ಒಡಿಶಾ ಪ್ರವಾಸ ಕೈಗೊಳ್ಳಲಿದ್ದಾರೆ. ಇಂದು ಅವರು ಭುವನೇಶ್ವರದಲ್ಲಿ ಉತ್ಕಲಮಣಿ ಪಂಡಿತ್ ಗೊಪಬಂಧು ದಾಸ್ ಅವರ ೯೬ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಾಳೆ ಅವರು, ಪುರಿ ಜಗನ್ನಾಥದ ಗುಂಡಿಚಾ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ತಮ್ಮ ಭೇಟಿಯ ವೇಳೆ ಅವರು, ಬಿಭೂತಿ ಕನುಂಗೊ ಕಾಲೇಜ್ ಆಫ್ ಆರ್ಟ್ಸ್ ಅಂಡ್ ಕ್ರಾಫ್ಟ್ ಮತ್ತು ಉತ್ಕಲ್ ಸಂಸ್ಕೃತಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದು, ಉದಯಗಿರಿ ಗುಹೆಗಳಿಗೂ ಭೇಟಿ ನೀಡಲಿದ್ದಾರೆ.

******

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಇಂದಿನಿಂದ ಎರಡು ದಿನಗಳ ಕಾಲ ಕೇರಳ ಪ್ರವಾಸ ಕೈಗೊಳ್ಳಲಿದ್ದಾರೆ. ಇಂದು ಅವರು, ಭಾರತೀಯ ಬಾಹ್ಯಾಕಾಶ, ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ - ಐಐಎಸ್‌ಟಿಯ ೧೨ನೇ ಘಟಿಕೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಇದೇ ವೇಳೆ ಅವರು,

ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪದಕ ನೀಡಲಿದ್ದಾರೆ. ನಾಳೆ ಉಪರಾಷ್ಟ್ರಪತಿ ಕೊಲ್ಲಂ ಮತ್ತು ಅಷ್ಟಮುಡಿ ಹಿನ್ನೀರಿಗೆ ಭೇಟಿ ನೀಡಲಿದ್ದಾರೆ.

******

ಆಗಸ್ಟ್ ೧೧ ರಂದು ನೀಟ್-ಪಿಜಿ ಪ್ರವೇಶ ಪರೀಕ್ಷೆ ೨೦೨೪ ನಡೆಯಲಿದೆ. ಎರಡು ಪಾಳಿಗಳಲ್ಲಿ ಪರೀಕ್ಷೆ ನಡೆಸಲಾಗುವುದು ಎಂದು ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿ ತಿಳಿಸಿದೆ. ಪರೀಕ್ಷೆಯ ಪರಿಷ್ಕೃತ ವೇಳಾಪಟ್ಟಿಯನ್ನು ಇಂದು ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿಯು ಬಿಡುಗಡೆ ಮಾಡಿದೆ. ಕಳೆದ ತಿಂಗಳು ನೀಟ್-ಪಿಜಿ ಪ್ರವೇಶ ಪರೀಕ್ಷೆಯನ್ನು ಮುಂದೂಡಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ಮಂಡಳಿಯು ಈ ನಿರ್ಧಾರವನ್ನು ಕೈಗೊಂಡಿತ್ತು.

******

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಅಂತಾರಾಷ್ಟ್ರೀಯ ಯೋಗ ದಿನದ ಮಾಧ್ಯಮ ಸಮ್ಮಾನ-೨೦೨೪' ಗೌರವಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ನೋಂದಾಯಿತ ಎಲ್ಲಾ ಮುದ್ರಣ ಮಾಧ್ಯಮ, ರೇಡಿಯೋ ಮತ್ತು ದೂರದರ್ಶನ ವಾಹಿನಿಗಳು ಮತ್ತು ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಇದೇ ೮ ಕೊನೆಯ ದಿನವಾಗಿದೆ. ಯೋಗಕ್ಕೆ ಸಂಬಂಧಿಸಿದಂತೆ ಮಾಹಿತಿ ಪ್ರಸಾರ, ಜನರಲ್ಲಿ ಯೋಗದ ಪ್ರಯೋಜನಗಳ ಕುರಿತು ಅರಿವು ಮೂಡಿಸುವುದು ಸೇರಿದಂತೆ ೨೦೨೪ರ ಜೂನ್ ೧೨ರಿಂದ ಜೂನ್ ೨೫ ರವರೆಗೆ ಪ್ರಸಾರ ಮಾಡಿರುವ ದೃಶ್ಯ ಶ್ರವ್ಯ ತುಣುಕುಗಳು ಅಥವಾ ಮುದ್ರಿತ ಸುದ್ದಿ, ಲೇಖನಗಳನ್ನು ಅರ್ಜಿಯೊಂದಿಗೆ ಲಗ್ಗತ್ತಿಸಬೇಕು. ಯೋಗ್ಯ ಅರ್ಜಿಗಳನ್ನು ಪರಿಶೀಲಿಸಿ, ಸ್ವತಂತ್ರ ಜೂರಿ ತಂಡವು ಅಂತಾರಾಷ್ಟ್ರೀಯ ಯೋಗ ದಿನದ ಮಾಧ್ಯಮ ಸಮ್ಮಾನ-೨೦೨೪' ಗೌರವಕ್ಕೆ ಆಯ್ಕೆ ಮಾಡಲಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪ್ರಕಟಣೆ ತಿಳಿಸಿದೆ.

******

ಭಾರತೀಯ ರೈಲ್ವೆ ಇಲಾಖೆಯು ಈ ವರ್ಷ ೨ ಸಾವಿರದ ೫೦೦ ಜನರಲ್ ಕೋಚ್‌ಗಳನ್ನು ತಯಾರಿಸಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಭಾರತೀಯ ರೈಲ್ವೆ ಇಲಾಖೆಯ ಗತಿ ಶಕ್ತಿ ವಿಶ್ವವಿದ್ಯಾಲಯ ಮತ್ತು ಪ್ರಮುಖ ವಾಣಿಜ್ಯ ವಿಮಾನ ತಯಾರಕ ಏರ್‌ಬಸ್ ನಡುವಿನ ಒಪ್ಪಂದದ ನಂತರ ಮಾತನಾಡಿದ ಅವರು, ಆರ್ಥಿಕವಾಗಿ ದುರ್ಬಲ ವರ್ಗ ಮತ್ತು ಮಧ್ಯಮ ವರ್ಗದವರರಿಗೆ ಸೇವೆ ಪೂರೈಸುವುದು ಸರ್ಕಾರದ ಪ್ರಧಾನ ಉದ್ದೇಶವಾಗಿದೆ ಎಂದರು.

******

ಭಾರತ ಹಾಗೂ ಕಾಂಗೊದ ರಕ್ಷಣಾ ಸಚಿವಾಲಯಗಳ ನಡುವಿನ ಮೊದಲ ಕಾರ್ಯದರ್ಶಿ ಮಟ್ಟದ ಸಭೆ ನವದೆಹಲಿಯಲ್ಲಿ ನಿನ್ನೆ ನಡೆಯಿತು. ಉಭಯ ರಾಷ್ಟ್ರಗಳ ನಡುವಿನ ರಕ್ಷಣಾ ಸಹಕಾರಕ್ಕಾಗಿ ವಿವಿಧ ಕ್ಷೇತ್ರಗಳನ್ನು ಗುರುತಿಸುವುದು ಈ ಸಭೆಯ ಉದ್ದೇಶವಾಗಿತ್ತು. ಸಭೆಯ ವೇಳೆ, ತರಬೇತಿ ಮತ್ತು ರಕ್ಷಣಾ ವಲಯದ ಸಹಕಾರಕ್ಕಾಗಿ ವ್ಯಾಪಕ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ರಕ್ಷಣಾ ಉತ್ಪಾದನೆಯಲ್ಲಿ ದೇಶ ಕಂಡಿರುವ ಬೆಳವಣಿಗೆಯನ್ನು ಭಾರತೀಯ ನಿಯೋಗ ಪ್ರಸ್ತುತಪಡಿಸಿತು ಎಂದು ಸಭೆಯ ಬಳಿಕ ರಕ್ಷಣಾ ಸಚಿವಾಲಯ ತಿಳಿಸಿದೆ.

******

ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷೆಗಳ ಮಂಡಳಿ ಇಂದು ಜೂನ್ ೨೦೨೪ ರ ವಿದೇಶಿ ವೈದ್ಯಕೀಯ ಪದವಿ ಪರೀಕ್ಷೆ  ಎಫ್‌ಎಂಜಿಇ ನಡೆಸಲಿದೆ. ದೇಶಾದ್ಯಂತ ೫೦ ನಗರಗಳಲ್ಲಿ ೭೧ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತಿದೆ. ಈ ಕುರಿತು ಮಾತನಾಡಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ಅಪೂರ್ವ ಚಂದ್ರ, ಎಫ್‌ಎಂಜಿಇ ಆಕಾಂಕ್ಷಿಗಳು ಪ್ರಶ್ನೆ ಪತ್ರಿಕೆ ಸೋರಿಕೆ ವದಂತಿಗಳಿಗೆ ಕಿವಿಗೊಡಬೇಡಿ ಎಂದು ಮನವಿ ಮಾಡಿದ್ದಾರೆ.

******

ನಿನ್ನೆ ರಾತ್ರಿ ಚೆನ್ನೈನ ಎಂಎ ಚಿದಂಬರಂ ಕ್ರೀಂಡಾಂಗಣದಲ್ಲಿ ನಡೆದ ಟಿ೨೦ ಅಂತಾರಾಷ್ಟ್ರೀಯ ಮಹಿಳಾ ಕ್ರಿಕೆಟ್ ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ೧೨ ರನ್‌ಗಳಿಂದ ಭಾರತವನ್ನು ಸೋಲಿಸಿದೆ. ಗೆಲುವಿಗೆ ೧೯೦ ರನ್‌ಗಳ ಗುರಿ ಬೆನ್ನತ್ತಿದ ಭಾರತದ ವನಿತೆಯರು ನಿಗದಿತ ೨೦ ಓವರ್‌ಗಳಲ್ಲಿ ೪ ವಿಕೆಟ್‌ಗೆ ೧೭೭ ರನ್ ಗಳಿಸಿದರು. ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ ತಂಡ ೨೦ ಓವರ್‌ಗಳಲ್ಲಿ ೪ ವಿಕೆಟ್‌ಗೆ ನಷ್ಟಕ್ಕೆ ೧೮೯ ರನ್ ಗಳಿಸಿತು. ದಕ್ಷಿಣ ಆಫ್ರಿಕಾ ಪರ ತಜ್ಮಿನ್ ಬ್ರಿಟ್ಸ್ ೮೧ ರನ್ ಗಳಿಸಿದರೆ, ಭಾರತದ ಸ್ಮೃತಿ ಮಂಧಾನ ೪೬ ರನ್ ಗಳಿಸಿದರು. ತಜ್ಮಿನ್ ಬ್ರಿಟ್ಸ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

******

ಯೂರೋ ಕಪ್-೨೦೨೪  ಫುಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ, ಸ್ಟಟ್‌ಗಾರ್ಟ್‌ನ ಎಂಎಚ್‌ಪಿ ಅರೆನಾದಲ್ಲಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಸ್ಪೇನ್ ೨-೧ ಗೋಲುಗಳಿಂದ ಜರ್ಮನಿಯನ್ನು ಸೋಲಿಸಿ ಸೆಮಿಫೈನಲ್‌ಗೆ ಪ್ರವೇಶಿಸಿತು.

***END***